ಪ್ರಸ್ತುತ 15050 ಜನರು ವಾಸಿಸುತ್ತಿರುತ್ತಾರೆ. ಇವರುಗಳು ಟಿಬೇಟಿನಿಂದ ಬಂದಿರುತ್ತಾರೆ. ಚೀನಾ ದೇಶವು ಟಿಬೇಟನ್ನು ಆಕ್ರಮಿಸಿಕೊಂಡ ನಂತರ ಅವರು ಮುಂಡಗೋಡಕ್ಕೆ ಬಂದಿರುತ್ತಾರೆ. ವ್ಯವಸಾಯ ,ಊಲನ್ ಬಟ್ಟೆ ಮಾರಾಟ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿರುತ್ತಾರೆ. ನಿರಾಶ್ರಿತರೆನ್ನುವ ಕಾರಣದಿಂದ ಬೇರೆ ದೇಶಗಳಿಂದ ಕೆಲವು ಲಾಮಾಗಳಿಗೆ ಸ್ವಾನಸರ್ ಶಿಪ್ ಹಣ ಬರುತ್ತದೆ.

ಇ) ಈ ಟಿಬೇಟಿಯನ್ನರು 50ಕ್ಕೂ ಹೆಚ್ಚಿನ ಎಕರೆ ಪ್ರದೇಶವನ್ನು ಅತಿಕ್ರಮಣ ಮಾಡಿದ್ದು ನಿಜವೇ; ಹಾಗಿದ್ದಲ್ಲಿ ಸರ್ಕಾರ ಯಾವ ಕ್ರಮಕೈಗೊಂಡಿದೆ;

ನಿಜ ಇರುವುದಿಲ್ಲ

ಈ) ಕಳೆದ 3 ವರ್ಷಗಳಲ್ಲಿ ಈ ಟಿಬೇಟಿಯನ್ ಪ್ರದೇಶಕ್ಕೆ ಅನಧಿಕೃತವಾಗಿ ಬಂದಿರುವ ಎಷ್ಟು ವ್ಯಕ್ತಿಗಳನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ ಹಾಗೂ ಈ ಪ್ರಕರಣ ಪೊಲೀಸ್ ಠಾಣೆಯಲ್ಲಿ ದಾಖಿಲಾಗಿದೆಯೇ;

ಕಳೆದ 3 ವರ್ಷದ ಅವಧಿಯಲ್ಲಿ ಈ ಟಿಬೇಟಿಯನ್ ಪ್ರದೇಶಕ್ಕೆ ಅನಧಿಕೃತವಾಗಿ ಯಾವುದೇ ವ್ಯಕ್ತಿಗಳು ಬಂದಿರುವ ಪ್ರಕರಣ ದಾಖಿಲಾಗಿರುವುದಿಲ್ಲ.

ಉ) ಹಾಗಿದ್ದಲ್ಲಿ, ಸದರಿ ವ್ಯಕ್ತಿಗಳ ಮೇಲೆ ಯಾವ ಕ್ರಮಕೈಗೊಳ್ಳಲಾಗಿದೆ;

ಯಾವುದೂ ಇರುವುದಿಲ್ಲ.

ಊ) ಟಿಬೇಟಿಯನ್ನರು ತಮ್ಮ ಹಬ್ಬಗಳಲ್ಲಿ ಭಾರತೀಯ ನೋಟುಗಳನ್ನು (ರೂಪಾಯಿ) ಸುಡುತ್ತಿರುವುದು ನಿಜವೇ;

ಟಿಬೇಟಿಯನ್ನರು ಹಬ್ಬಗಳಲ್ಲಿ ಚಲಾವಣೆಗೆ ಬಾರದ ಭಾರತೀಯ ನಾಣ್ಯಗಳನ್ನು ಹಾಗೂ ದವಸಧಾನ್ಯಗಳನ್ನು ದುಷ್ಟಶಕ್ತಿಯನ್ನು ನಿಗ್ರಹಿಸುವ ಸಲುವಾಗಿ ಅಗ್ನಿಗೆ ಹಾಕುವ ಸಂಪ್ರದಾಯ ಇರುತ್ತದೆಂದು ಮಾಹಿತಿ ಇರುತ್ತದೆ. ಆದರೆ ಕಳೆದ ಒಂದು ವರ್ಷದಿಂದ ಈ ಸಂಪ್ರದಾಯವನ್ನು ಬಿಟ್ಟಿರುತ್ತಾರೆ.

ಋ) ಹಾಗಿದ್ದಲ್ಲಿ, ಅಂಥವರ ಮೇಲೆ ಸರ್ಕಾರ ಯಾವ ಕ್ರಮಕೈಗೊಂಡಿದೆ?

ಯಾವುದೂ ಇರುವುದಿಲ್ಲ.

ಸಂ.ಒಇ 13 ಪಿಸಿಕ್ಯು 09

ಮಿನಿ ವಿಧಾನ ಸೌಧದ ಕಾಮಗಾರಿ

17 ಶ್ರೀ ಸತ್ಯನಾರಾಯಣ.ಎಂ.(ಚಾಮುಂಡೇಶ್ವರಿ)

ಮಾನ್ಯ ಲೋಕೋಪಯೋಗಿ ಸಚಿವರು

ಅ) ಮೈಸೂರಿನಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಕಾಮಗಾರಿಯು ದಿ: 28.4.2005ರಂದು ಪ್ರಾರಂಭಿಸಿದ್ದು, ಇದುವರೆವಿಗೂ ಪೂರ್ಣಗೊಳಿಸದೇ ವಿಳಂಬವಾಗಿರುವುದಕ್ಕೆ ಕಾರಣಗಳೇನು;

ಮೈಸೂರಿನಲ್ಲಿ ಮಿನಿ ವಿಧಾನಸೌಧ ಕಾಮಗಾರಿಯು ದಿ: 28.4.2005ರಂದು ಪ್ರಾರಂಭಿಸಿದ್ದು, ಕಟ್ಟಡ ಕಾಮಗಾರಿಯಲ್ಲಿ ವಾಸ್ತು ಶಿಲ್ಪಕ್ಕೆ ಸಂಬಂಧಿಸಿದ ಐಟಂಗಳಾದ ಆರ್‌ಸಿಸಿ ಕಪೋತಾ, ಕರಣಕು, ಪದ್ಮ ಜಗದಿ ಲೋಟಸ್, ವಿಂಡೋ ಆರ್ಚ್‌ಸ್ ಮುಂತಾದ ಕಾಮಗಾರಿಗಳಿಗೆ ಇಡಗಂಟನ್ನು ಒದಗಿಸಲಾಗಿದ್ದು, ಅವುಗಳಿಗೆ ಡೇಟಾದರ ಅನುಮೋದನೆ ಪಡೆದು ಪ್ರತ್ಯೇಕವಾಗಿ ಅನುದಾನದೊಂದಿಗೆ ಟೆಂಡರನ್ನು ಕರೆದು ಕಾಮಗಾರಿಯನ್ನು ನಿರ್ವಹಿಸಬೇಕಾಗಿದ್ದರಿಂದ ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ.

ಆ) ಈ ಕಾಮಗಾರಿಯನ್ನು ಯಾವ ದಿನಾಂಕಕ್ಕೆ ಪೂರ್ಣಗೊಳಿಸಿ ಹಸ್ತಾಂತರಿಸಲಾಗುವುದು.

ಸದರಿ ಕಟ್ಟಡ ಕಾಮಗಾರಿಯನ್ನು ದಿ: 30.11.2009ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸಲಾಗುವುದು.

ಇ) ಈ ಕಟ್ಟಡ ನಿರ್ಮಾಣ ಕಾಮಗಾರಿಗೆ ಬಿಡುಗಡೆಯಾಗಿರುವ ಅನುದಾನವೆಷ್ಟು ಹಾಗೂ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗಿರುವ ಅನುದಾನವೆಷ್ಟು;

ಈ ಕಟ್ಟಡ ಕಾಮಗಾರಿಗೆ ಇಲ್ಲಿಯವರೆಗೆ ರೂ. 527.21 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ ಹಾಗೂ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಒಟ್ಟು ರೂ. 402.79 ಲಕ್ಷಗಳ ಅನುದಾನ ಬೇಕಾಗಿರುತ್ತದೆ.

ಈ) ಈ ಕಾಮಗಾರಿಯ ಬಾಕಿ ಬಿಲ್ಲಿನ ಮೊತ್ತವೆಷ್ಟು;

ಈ ಕಾಮಗಾರಿಗೆ ಸದ್ಯಕ್ಕೆ ಬಾಕಿ ಬಿಲ್ಲು ಇರುವುದಿಲ್ಲ.

ಉ) ಈ ಕಾಮಗಾರಿಗೆ ಪರಿಷ್ಕೃತ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ;

ಹೌದು.

ಊ) ಹಾಗಿದ್ದಲ್ಲಿ, ಎಷ್ಟು ಮೊತ್ತಕ್ಕೆ ತಯಾರಿಸಲಾಗಿದೆ ಹಾಗೂ ಇದಕ್ಕೆ ಅನುಮೋದನೆ ನೀಡಲಾಗಿದೆಯೇ; ಮಾಹಿತಿ ನೀಡುವುದು.

ಈ ಕಾಮಗಾರಿಗೆ ಪರಿಷ್ಕೃತ ಅಂದಾಜು ಪಟ್ಟಿ ರೂ. 930-00 ಲಕ್ಷಗಳಿಗೆ ತಯಾರಿಸಿ ಕಂದಾಯ ಇಲಾಖೆಗೆ ದಿ: 11.8.2008ರಂದು ಸಲ್ಲಿಸಲಾಗಿದೆ.

ಋ) ಮೈಸೂರು ತಾಲ್ಲೂಕು ಕೆ.ಆರ್.ಎಸ್.ಹಿನ್ನೀರಿನಲ್ಲಿ ಸಾಗರ ಕಟ್ಟೆ ಹತ್ತಿರ ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ಕೆ.ಆರ್.ಡಿ.ಸಿ.ಎಲ್. ವತಿಯಿಂದ ನಿರ್ಮಿಸುತ್ತಿರುವ ಸೇತುವೆ ನಿರ್ಮಾಣ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಸಮಯ ಬೇಕಾಗಬಹುದು(ಮಾಹಿತಿ ನೀಡುವುದು)

ಮೈಸೂರು ತಾಲ್ಲೂಕಿನ ಕೆ.ಆರ್.ಎಸ್.ಹಿನ್ನೀರಿನ ಸಾಗರಕಟ್ಟೆ ಹತ್ತಿರ ಲಕ್ಷ್ಮಣತೀರ್ಥ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣವನ್ನು ಕೆಆರ್‌ಡಿಸಿಎಲ್ ವತಿಯಿಂದ 3ನೇ ಹಂತದ ಸೇತುವೆಯ ನಿರ್ಮಾಣದ ಯೋಜನೆಯಡಿಯಲ್ಲಿ

ಹೆಚ್ಚುವರಿಯಾಗಿ ತೆಗೆದುಕೊಳ್ಳಲಾಗಿದೆ. ಪ್ರಸ್ತುತ ಈ ಕಾಮಗಾರಿಯು 9 ಗುದಕಂಬಗಳು ಮತ್ತು 1 ಅಬಟ್‌ಮೆಂಟ್ ಅಡಿಪಾಯದ ಕಾಮಗಾರಿಗಳು ಮುಕ್ತಾಯಗೊಂಡಿದೆ ಬಾಕಿ ಕಾಮಗಾರಿಗಳು ವಿವಿಧ ಹಂತದಲ್ಲಿದೆ. ಕಾಮಗಾರಿಯನ್ನು ಪೂರ್ಣಗೊಳಿಸಲು ಅನುದಾನದ ಲಭ್ಯತೆಯ ಮೇರೆಗೆ ಕೈಗೊಳ್ಳಲಾಗುವುದು.

ಎ) ಮೈಸೂರು ವಿಜಯನಗರ(ಹೂಟಗಳ್ಳಿ) ಸರ್ಕಾರಿ ಮಹಿಳಾ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಕಳೆದ ಮೂರು ವರ್ಷಗಳ ಹಿಂದೆಯೆ ಅನುದಾನ ನೀಡಿದ್ದರೂ ಇದುವರೆವಿಗೂ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಇದಕ್ಕೆ ಕಾರಣಗಳೇನು; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಮೈಸೂರು ವಿಜಯನಗರ(ಹೂಟಗಳ್ಳಿ) ಸರ್ಕಾರಿ ಮಹಿಳಾ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಕಳೆದ ಮುರು ವರ್ಷಗಳ ಹಿಂದೆಯೇ ಅನುದಾನ ನೀಡಲಾಗಿದ್ದರೂ, ಸದರಿ ಕಟ್ಟಡ ಕಾಮಗಾರಿಗೆ ನಿವೇಶನಕ್ಕಾಗಿ ಮೂಡ ಕಛೇರಿಗೆ ರೂ.30.30 ಲಕ್ಷಗಳನ್ನು ಪಾವತಿ ಮಾಡಲಾಗಿರುತ್ತದೆ. ಆದರೆ, ಮೂಡ ಕಛೇರಿಯವರು ಸಭೆ ನಡೆಸಿ ನಿವೇಶನ ನೀಡುವುದಾಗಿ ತಿಳಿಸಿರುವುದರಿಂದ ಇದುವರೆಗೂ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಈ ಮಾಹಿತಿಯನ್ನು ಸರ್ಕಾರದ ಗಮನಕ್ಕೆ ತಂದಿರುವುದಿಲ್ಲ.

<u>ಕರ್ನಾಟಕ ವಿಧಾನ ಸಭೆ</u>

55 ಶ್ರೀ ಜಾರ್ಜ್.ಕೆ.ಜೆ

ಶ್ರೀ ಆರ್ ಅಶೋಕ ಮಾನ್ಯ ಸಾರಿಗೆ ಸಚಿವರು

ಅ) ಸರ್ವಜ್ಞ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳ ಕೊರತೆ ಇರುವುದು ಮತ್ತು ಬಸ್ ನಿಲ್ದಾಣಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸರ್ವಜ್ಞನಗರದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಕೆಲವು ಸ್ಥಳಗಳಲ್ಲಿ ಬಸ್ ತಂಗುದಾಣಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹಾಗಿದ್ದಲ್ಲಿ, ಬಸ್ ನಿಲ್ದಾಣಗಳನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೆ(ವಿವರ ನೀಡುವುದು)?

ಸರ್ವಜ್ಞನಗರವು ಸೇರಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಬಸ್ ತಂಗುದಾಣಗಳ ವಿವರಗಳನ್ನು ಪಾಲಿಕೆಗೆ ಸಲ್ಲಿಸಿದ್ದು, ಬಸ್ ತಂಗುದಾಣಗಳನ್ನು ನಿರ್ಮಿಸುವಂತೆ ಕೋರಲಾಗಿದೆ.